# ಕಾಲೇಜಿನ ಇತಿಹಾಸ

ಕರ್ನಾಟಕದ ಗಡಿಯಂಚಿನ ನಂಜುಂಡಪ್ಪರವರ ವರದಿ ಪ್ರಕಾರ ಅತೀ ಹಿಂದುಳಿದ, ಸದಾ ಬರದ ವಾತಾವರಣದಲ್ಲಿರುವ, ಆಂಧ್ರಪ್ರದೇಶದ ಅನಂತಪುರ ಜಿಲ್ಲೆಯ ಗಡಿಗೆ ಅಂಟಿಕೊಂಡಿರುವ ತುಮಕೂರು ಜಿಲ್ಲೆಯ ಕಟ್ಟಕಡೆಯ ತಾಲ್ಲೂಕೇ ಪಾವಗಡ. ಈ ತಾಲ್ಲೂಕು ಇಂತಹ ಸ್ಥಿತಿ ಇದ್ದರೂ ವ್ಯಾಪಾರ ಹಾಗೂ ಆಧ್ಯಾತ್ಮಿಕ ದೃಷ್ಟಿಯಿಂದ ಸದಾ ಜನಜಂಗುಳಿಯಿಂದ ತುಂಬಿ ತುಳುಕುತ್ತಾ, ಸದಾ ಕ್ರಿಯಾಶೀಲವಾಗಿದ್ದು, ಶೈಕ್ಷಣಿಕವಾಗಿ ತನ್ನದೇ ಸ್ಥಾನವನ್ನು ಪಡೆದಿದೆ. ಶಿಕ್ಷಣವೇ ಸರ್ವ ಸಮಸ್ಯೆಗಳ ಪರಿಹಾರ ಎಂಬುದನ್ನು ಮನಗಂಡ ತಾಲ್ಲೂಕಿನ ಜನತೆ ಆ ದಾರಿಯಲ್ಲಿ ಸಾಗುತ್ತಿದ್ದು, ತಮ್ಮ ತಮ್ಮ ಜೀವನಗಳನ್ನು ಉತ್ತಮಗೊಳಿಸಿಕೊಳ್ಳುತ್ತಿದ್ದಾರೆ. ಈ ನಿಟ್ಟಿನಲ್ಲಿ ಮಹಿಳಾ ಸಬಲೀಕರಣದ ಪ್ರತೀಕವೆಂಬತೆ, ಮಹಿಳಾ ಉನ್ನತ ಶಿಕ್ಷಣದ ಗುರಿಗಾಗಿ 2014-15ನೇ ಸಾಲಿನಲ್ಲಿ ಸರ್ಕಾರಿ ಮಹಿಳಾ ಪ್ರಥಮ ದರ್ಜೆ ಕಾಲೇಜು, ಸರ್ಕಾರಿ ಪದವಿ ಪೂರ್ವ ಕಾಲೇಜಿನ ಆವರಣದಲ್ಲಿ ಪ್ರಾರಂಭವಾಗಿ ಇಂದಿಗೆ 6 ವರ್ಷಗಳನ್ನು ಪೂರೈಸಿದೆ. “ಜ್ಞಾನವೇ ಶಕ್ತಿ” ಎಂಬ ಧ್ಯೇಯ ವಾಕ್ಯವನ್ನೊಳಗೊಂಡ ಈ ಕಾಲೇಜು 2016-17ನೇ ಸಾಲಿನಲ್ಲಿ ತುಮಕೂರು ವಿಶ್ವವಿದ್ಯಾನಿಲಯ ಮಟ್ಟದಲ್ಲಿಯೇ ಕು. ಲಾವಣ್ಯ ಎಂ ಎನ್ ರವರು ಬಿ.ಕಾಂ (ಸಿ.ಎಸ್) ವಿಭಾಗದಲ್ಲಿ ಪ್ರಥಮ ರ್ಯಾಂಕ್ ಗಳಿಸಿ 3 ಚಿನ್ನದ ಪದಕಗಳನ್ನು, 2017-18 ನೇ ಸಾಲಿನಲ್ಲಿ ಕು. ಅಶ್ವಿನಿ ರವರು ಕಲಾ ವಿಭಾಗ (ಹೆಚ್.ಇ.ಕೆ) ದಲ್ಲಿ 6ನೇ ರ್ಯಾಂಕ್ ಗಳಿಸಿ ಚಿನ್ನದ ಪದಕವನ್ನು ಪಡೆದಿದ್ದು, ಇವರಿಬ್ಬರೂ ಶೈಕ್ಷಣಿಕವಾಗಿ ನಮ್ಮ ಕಾಲೇಜು, ಪೋಷಕರು ಹಾಗೂ ತಾಲ್ಲೂಕಿಗೆ ಕೀರ್ತಿಯನ್ನು ತಂದಿದ್ದಾರೆ. ವಿದ್ಯಾರ್ಥಿನಿಯರ ಉತ್ತಮ ಫಲಿತಾಂಶಕ್ಕಾಗಿ ಗ್ರಂಥಾಲಯ, ಇವರ ಶಾರೀರಿಕ ಹಾಗೂ ಮಾನಸಿಕ ದೃಢತೆಗಾಗಿ ಕ್ರೀಡೆಗಳ ಆಯೋಜನೆ, ವಿಶೇಷವಾಗಿ ವಿವಿಧ ಸ್ಪರ್ಧಾತ್ಮಕ ಪರೀಕ್ಷೆಯಲ್ಲಿ ಭಾಗಿಯಾಗುವ ಸ್ಪರ್ಧಾರ್ಥಿಗಳಿಗೆ ತರಬೇತಿ ನೀಡುವ ಉದ್ಯೋಗ ಭರವಸಾ ಕೋಶ, ಅಲ್ಲದೆ ಮಹಿಳಾ ಸಬಲೀಕರಣ ಪ್ರಕ್ರಿಯೆಯಲ್ಲಿ ಸಹಾಯವಾಗಿರುವ ಉದ್ಯೋಗ ಪಡೆದುಕೊಳ್ಳುವಲ್ಲಿ ನೆರವಾಗುವ, ಸಮಾಜ ಸೇವೆಯಲ್ಲಿ ತೊಡಗಿಕೊಳ್ಳುವ, ಶಿಸ್ತನ್ನು ಮೂಡಿಸಿಕೊಳ್ಳಲು, ಐ.ಕ್ಯೂ.ಎ.ಸಿ. ನ್ಯಾಕ್, ರೆಡ್‌ಕ್ರಾಸ್, ಸ್ಕೌಟ್ಸ್-ಗೈಡ್ಸ್, ಎನ್.ಎಸ್.ಎಸ್, ಕ್ರೀಡೆ, ಸಾಂಸ್ಕøತಿಕ, ಆಪ್ತ ಸಮಾಲೋಚನೆ ಇತ್ಯಾದಿ ಸಮಿತಿಗಳ ಮೂಲಕ ವಿವಿಧ ರಂಗಗಳಲ್ಲಿ ಪ್ರಗತಿಯನ್ನು ಕಾಣಲು ಶ್ರಮಿಸಲಾಗುತ್ತದೆ. ಅಲ್ಲದೆ ಕುರುಬರ ಹಳ್ಳಿ ಗೇಟ್ ಬಳಿ ಸರ್ಕಾರಿ ಮಹಿಳಾ ಪ್ರಥಮ ದರ್ಜೆ ಕಾಲೇಜಿಗೆ ಮೀಸಲಾದ 13 ಎಕರೆ 18 ಗುಂಟೆ ನಿವೇಶನದಲ್ಲಿ 2 ಭವ್ಯ ಕಟ್ಟಡಗಳ ನಿರ್ಮಾಣ ಹಂತದಲ್ಲಿದ್ದು, ಅತೀ ಶೀಘ್ರವಾಗಿ ಸ್ಥಳಾಂತರಿಸಲಾಗುವುದು. ಅಲ್ಲದೇ ಕಾಲೇಜಿನ ಹೊಸ ಕಟ್ಟಡದ ಪಕ್ಕದಲ್ಲಿಯೇ ಬಾಲಕೀಯರ ವಸತಿ ನಿಲಯವಿದ್ದು, ಸಾಕಷ್ಟು ಅನುಕೂಲವಾಗಿದೆ. ಕಾಲೇಜು ಪ್ರತೀ ವರ್ಷ ಎಲ್ಲಾ ರಂಗದಲ್ಲಿಯೂ ಪ್ರಗತಿಯನ್ನು ಸಾಧಿಸುತ್ತಿದ್ದು, ಇದಕ್ಕಾಗಿ ಸಹಾಯ ಮಾಡಿದ ದಾನಿಗಳು, ಪೋಷಕರು, ಜನಪ್ರತಿನಿಧಿಗಳು, ಸಿ.ಡಿ.ಸಿ ಅಧ್ಯಕ್ಷರು ಹಾಗೂ ಸದಸ್ಯರು ಹಾಗೂ ಸಮಸ್ತ ತಾಲ್ಲೂಕಿನ ನಾಗರೀಕರು ಹಾಗೂ ಎಲ್ಲಾ ಬೋಧಕ, ಬೋಧಕೇತರ ಸಿಬ್ಬಂದಿಗಳನ್ನು ಈ ಮೂಲಕ ಸ್ಮರಿಸಲಾಗುತ್ತಿದೆ.